CC 21722/2025
PW-1

**(ಈ ದಿನ ಆದ ಆದೇಶದನ್ವಯ ಸಾಕ್ಷಿಯನ್ನು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.)**
**ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಎಸ್.ಟಿ.ಪಿ ವಕೀಲರಿಂದ :-**

ಈ ಪ್ರಕರಣದಲ್ಲಿ ನಾನು ಅಧಿಕಾರ ಪತ್ರವನ್ನು ಹೊಂದಿದವನು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ನೀವು ಸಾಕ್ಷಿ ಹೇಳುವ ಯಾವುದೇ ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ. ಅಧಿಕಾರ ಪತ್ರ ಹೊಂದದ ನಾನು ಈ ಪ್ರಕರಣದಲ್ಲಿ ನೀಡಿದ ಯಾವುದೇ ಸಾಕ್ಷ್ಯ ನ್ಯಾಯಾಲಯದ ಒಪ್ಪತಕ್ಕದಲ್ಲ ಎಂದರೆ ಸರಿಯಲ್ಲ. ಮುಂದಿನ ದಿನದಲ್ಲಿ ನ್ಯಾಯಾಲಯಕ್ಕೆ ಅಧಿಕಾರ ಪತ್ರ ಹಾಜರುಪಡಿಸಲು ಸಿದ್ದರಿದ್ದೀರಾ ಎಂದರೆ ಸಾಕ್ಷಿಯು ನಾನು ಈಗಾಗಲೇ ನನಗೆ ಸಾಕ್ಷಿ ಹೇಳಲು ನೀಡಿದ ಸ್ಪೇಷಲ್ ಪವರ್ ಆಫ್ ಅಟಾರ್ನಿಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಯು ಸ್ವಯಃ ಆಗಿ ಇನ್ನೊಮ್ಮೆ ಬೇಕಾದರೆ ದಾಖಲೆ ಸಲ್ಲಿಸಲು ತಯಾರಿದ್ದೇನೆ ಎಂದು ಹೇಳುತ್ತಾರೆ. ಸದರಿ ಜಿ.ಪಿ.ಎ ಅನ್ನು ನ್ಯಾಯಾಲಯದಲ್ಲಿ ನಿಶಾನಿಕರಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದಲ್ಲಿ ನಾನು ಯಾವುದೇ ಜಿ.ಪಿ.ಎ ನ್ನು ಹಾಜರುಪಡಿಸದ ಕಾರಣ ಅದನ್ನು ನಿಶಾನಿಕರಿಸಿಲ್ಲ, ಆದ್ದರಿಂದ ನನಗೆ ಸಾಕ್ಷ್ಯ ನೀಡುವ ಹಕ್ಕಿಲ್ಲ ಎಂದರೆ ಸರಿಯಲ್ಲ.

**2.** ನಿಪಿ-6 ರಲ್ಲಿ ಹಸ್ತಾಕ್ಷರದ ಬರವಣಿಗೆ ಇದೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ಸದರಿ ಕೈ-ಬರಹದ ಬರವಣಿಗೆಯ ಪಕ್ಕದಲ್ಲಿ ಆರೋಪಿ ಅಥವಾ ಸಂಬಂಧಿತ ಅಧಿಕಾರಿಯ ಚಿಕ್ಕ ಸಹಿ ಇಲ್ಲ ಎಂದರೆ ಸಾಕ್ಷಿ ಒಪ್ಪುತ್ತಾರೆ. ಮುಂದುವರೆದು ಅದರ ಅವಶ್ಯಕತೆ ಇಲ್ಲ ಎಂದು ಸ್ವಯಃ ಹೇಳುತ್ತಾರೆ.

**ಪ್ರಶ್ನೆ:** ನಿಪಿ-6 ಕರಾರಿನಲ್ಲಿ ಪ್ರತಿಯೊಂದು ಕ್ಲಾಸ್ ಗಣಕಯಂತ್ರದ ಮುಖಾಂತರ ಬೆರಳಚ್ಚು ಮಾಡಲಾಗಿದ್ದು, ಒಂದೆರಡು ಕಡೆ ಹಸ್ತಾಕ್ಷರದಿಂದ ಏಕೆ ಬರೆಯಲಾಗಿದೆ?

**ಉತ್ತರ:** ಆರೋಪಿ ನಮಗೆ ಅರ್ಜಿ ಸಲ್ಲಿಸಿದ ನಂತರ ಸದರಿ ಅರ್ಜಿಯನ್ನು ಪುರಸ್ಕರಿಸಲು ಅಥವಾ ತಿರಸ್ಕರಿಸಲು ಕೆಲವು ಸಮಯ ಬೇಕಾಗುತ್ತದೆ, ಸದರಿ ಪ್ರೊಸೆಸಿಂಗ್ ಸಮಯದಲ್ಲಿ ಕೆಲವೊಂದು ನಂಬರ್ ಗಣಕಯಂತ್ರದಲ್ಲಿ ಪ್ರೊಸೆಸ್ ಆಗುತ್ತದೆ, ಸದರಿ ಪ್ರೊಸೆಸಿಂಗ್ ನಂಬರನ್ನು ಅಲ್ಲಿ ಹಸ್ತಾಕ್ಷರದಲ್ಲಿ ಬರೆಯಬೇಕಾಗುತ್ತದೆ.

**3.** ನೀವು ನೀಡಿದ ಉತ್ತರದಲ್ಲಿ ಹೇಳಿದ್ದನ್ನು ನಿಪಿ-6 ರಲ್ಲಿ ಉಲ್ಲೇಖಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅಗ್ರಿಮೆಂಟ್ ಎಂದರೆ ಮಾತುಕತೆ ಸಂಪೂರ್ಣಗೊಂಡ ನಂತರವೇ ಆಗುವಂತಹ ಪ್ರಕ್ರಿಯೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಹಸ್ತಾಕ್ಷರದಲ್ಲಿ ಬರೆದ ಒಕ್ಕಣೆಗಳು ಅಗ್ರಿಮೆಂಟ್ ಆದ ನಂತರ ಬರೆದದ್ದು ಎಂದರೆ ಸಾಕ್ಷಿಯು ಸದರಿ ಅಗ್ರಿಮೆಂಟಿಗೆ ಸಹಿ ಆಗುವ ಮೊದಲು ಬರೆದಿದ್ದು ಎಂದು ಹೇಳುತ್ತಾರೆ. ನಿಪಿ-6ನ್ನು ನಾವು ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ಅಗ್ರಿಮೆಂಟಿನ ಕೊನೆಯ ಪುಟದಲ್ಲಿಯೂ ಸಹ ಹಸ್ತಾಕ್ಷರದಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿಯು ಒಪ್ಪುತ್ತಾರೆ. ಅಲ್ಲಿಯೂ ಸಹ ಯಾವುದೇ ಸಣ್ಣ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ-6 ರ ಪ್ರಕಾರ ಕ್ಲಾಸ್-8 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ತಿಳಿದಿದೆ. ಸಾಕ್ಷಿ ನಿಪಿ-6 ನ್ನು ನೋಡಿ, ಅದನ್ನು ಬರೆದ ಕ್ಲಾಸ್-8 ನ್ನು ಓದಿ ಅದನ್ನು ನಾನು ತಿಳಿದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಕ್ಲಾಸ್ ಪ್ರಕಾರ ಈ ನ್ಯಾಯಾಲಯಕ್ಕೆ ಪ್ರಕರಣ ತೀರ್ಮಾನ ಮಾಡಲು ವ್ಯಾಪ್ತಿ ಇಲ್ಲ ಎಂದರೆ ಸರಿಯಲ್ಲ. ವ್ಯಾಪ್ತಿ ಇಲ್ಲದ ಪ್ರಕರಣವನ್ನು ಈ ನ್ಯಾಯಾಲಯದಲ್ಲಿ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಈ ಪ್ರಕರಣದಲ್ಲಿ ಕಳುಹಿಸಿದ ನೋಟಿಸನ್ನು ಹೊರತುಪಡಿಸಿ, ಕಮರ್ಷಿಯಲು ಪ್ರಕರಣಕ್ಕೆ ಸಂಬಂಧಿಸಿದ ಯಾವುದಾದರೂ

ನೋಟಿಸನ್ನು ಕಳುಹಿಸಿದ್ದೀರಾ ಎಂದರೆ ಸಾಕ್ಷಿಯು ಆರ್ಬಿಟ್ರೇಷನ್ ನೋಟಿಸು ಕಳುಹಿಸಿಲ್ಲ ಎಂದು ಹೇಳುತ್ತಾರೆ. ಸಾಲದ ಮೊತ್ತ ಎಷ್ಟು ಬಾಕಿ ಇದೆ ಎಂದು ಹೇಳಿ ಒಂದು ನೋಟಿಸನ್ನು ಆರೋಪಿಗೆ ನೀಡಿದ್ದೆವು ಎಂದು ಸಾಕ್ಷಿ ಸ್ವಯಃ ಆಗಿ ಹೇಳುತ್ತಾರೆ.

**4.** ನಮ್ಮ ಸಂಸ್ಥೆಗೂ ಮತ್ತು ಆರೋಪಿತರಿಗೆ ಕೊನೆಯ ವ್ಯವಹಾರ ಆದ ದಿನಾಂಕಃ 29-06-2020 ಎಂದು ನಾನು ಸಲ್ಲಿಸಿದ ದಾಖಲೆ-ನಿಪಿ10 ರಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಅದು ಕೊನೆಯ ವ್ಯವಹಾರದ ದಿನಾಂಕ ಅಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಸ್ವಯಃ ಆಗಿ ಆನಂತರವೂ ಕೂಡ ಒಂದು ವ್ಯವಹಾರ ನಡೆದಿದೆ ಎಂದು ಹೇಳುತ್ತಾರೆ. ಆ ನಂತರದ ವ್ಯವಹಾರದ ಬಗ್ಗೆ ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಆ ನಂತರ ವ್ಯವಹಾರ ಆಗಿಲ್ಲ ಎಂದು ಹೇಳುತ್ತಾರೆ.

**5.** ಸಾಕ್ಷಿಗೆ ಒಂದು ನೋಟಿಸಿನ ಪ್ರತಿಯನ್ನು ತೋರಿಸಿ ಇದು ನಿಮ್ಮ ಸಂಸ್ಥೆಯವರು ನೀಡಿದ ನೋಟಿಸು ಎಂದರೆ ಸಾಕ್ಷಿಯು ಸದರಿ ನೋಟಿಸು ನಮ್ಮ ಸಂಸ್ಥೆಯ ನೋಟಿಸು ಅಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಸಾಕ್ಷಿಗೆ ನೀಡಿದ IFFDC ಎಂದು ಬರೆದಿರುವ ದಿನಾಂಕಃ 10-08-2020 ರ ನೋಟಿಸನ್ನು ನಿಶಾನಿಕರಿಸಿರುವುದಿಲ್ಲ. ಸದರಿ ನೋಟಿಸಿನಲ್ಲಿ ಡಾಃನಾರಾಯಣಸ್ವಾಮಿ ಎಂದು ನಮೂದಿದೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ಆದರೆ ಸದರಿ ದಾಖಲೆ ನಮ್ಮದಲ್ಲ ಎಂದು ಹೇಳುತ್ತಾರೆ. ದಿನಾಂಕಃ10-08-2020 ರಂದು ನಾನೇ ಸದರಿ ನೋಟಿಸನ್ನು ಆರೋಪಿಗೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ನೋಟಿಸು ಪ್ರಕಾರ ಆರೋಪಿ ನಮಗೆ ರೂ.2,54,679/- ನೀಡದೆ ಹೋದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದೀರಾ ಎಂದರೆ ಸರಿಯಲ್ಲ. ಈ ನೋಟಿಸು ನೀಡಿದ ನಂತರವೇ ಆರೋಪಿ ನಮ್ಮ ಸಂಸ್ಥೆಗೆ

ರೂ.2,00,000/- ನ್ನು ಜಮೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಸಾಕ್ಷಿಯು ಸ್ವಯಃ ಆಗಿ ಸದರಿ ಹಣ ಪಾವತಿಯು ನಮ್ಮ ಲೆಡ್ಜರ್ ನಿಪಿ-11 ರಲ್ಲಿ ನಮೂದಿರುತ್ತದೆ ಎಂದು ಹೇಳುತ್ತಾರೆ. ಈ ರೀತಿ ರೂ.2,00,000/- ಜಮೆ ಮಾಡಿದ ನಂತರ ಆರೋಪಿ ನಮಗೆ ರೂ.54,679/- ಅಷ್ಟೇ ಪಾವತಿಸಬೇಕು ಎಂದರೆ ಸರಿಯಲ್ಲ. ಅಗ್ರಿಮೆಂಟ್ ಸಮಯದಲ್ಲಿ ಆರೋಪಿ ಕಡೆಯಿಂದ ನಾವು ರೂ.1,00,000/- ಡೆಪಾಸಿಟ್ ಪಡೆದುಕೊಂಡಿದ್ದೇವೆ ಎಂದರೆ ಆ ಬಗ್ಗೆ  ನಾನು ಕಛೇರಿ ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿ ನಮ್ಮ ಕಡೆ ಈಗಾಗಲೇ ಆ ಸಮಯದಲ್ಲಿ ರೂ.1,00,000/- ಡೆಪಾಸಿಟ್ ಮಾಡಿದ್ದು, ಅದನ್ನು ನಾವು ಸ್ವೀಕರಿಸಿದ್ದೇವೆ ಎಂದರೆ ಅದನ್ನು ನೋಡಿ ಹೇಳಬೇಕಾಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ದಾಖಲೆ ಪ್ರಕಾರವೇ ಹೋದರೂ ಸಹ ಆರೋಪಿಗೆ ಈ ಪ್ರಕರಣದಲ್ಲಿ ನಾವೇ ರೂ.46,000/- ನ್ನು ಮರುಪಾವತಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ಈ ಮೊತ್ತಕ್ಕೆ 18.75 ಶೇಕಡ ಬಡ್ಡಿ 2018 ರಿಂದ ಇಲ್ಲಿಯವರೆಗೆ ಪಾವತಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

**6.** ಚೆಕ್ಕು ಮೊತ್ತವನ್ನು ಯಾವ ಆಧಾರದ ಮೇಲೆ ಕ್ಲೈಮ್ ಮಾಡುತ್ತೇವೆ ಎಂದರೆ ಸಾಕ್ಷಿಯು ಲೆಡ್ಜರ್ ಎಕ್ಸ್ ಟ್ರಾಕ್ಟ್ ಬಾಲನ್ಸ್ ಪ್ರಕಾರವೇ ಚೆಕ್ಕು ನೀಡಿದ ದಿನಾಂಕದಂದು ಚೆಕ್ಕು ಮೊತ್ತ ಬರೆದು ಆರೋಪಿ ನಮಗೆ ನೀಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ದಾಖಲಾತಿ ಪ್ರಕಾರ ಆರೋಪಿ ಮತ್ತು ನಿಮ್ಮ ಸಂಸ್ಥೆಯ ಕೊನೆಯ ವ್ಯವಹಾರ ಆಗಿದ್ದು 2020 ರಲ್ಲಿ ಎಂದರೆ ಸಾಕ್ಷಿಯು ಒಪ್ಪುತ್ತಾರೆ. ಸ್ವಯಃ ಆಗಿ ನಮಗೆ ಬರಬೇಕಾದ ಮೊತ್ತವನ್ನು ಕೊಡುತ್ತೇನೆ ಎಂದು ಆರೋಪಿ ಹೇಳಿ ಆ ನಂತರದಲ್ಲಿ ನಮ್ಮ ಸಂಸ್ಥೆಗೆ ಆರೋಪಿ ಸಂಪರ್ಕಿಸಿದ್ದೇ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕಃ10-08-2020 ಕ್ಕೆ ಆರೋಪಿ ನಮಗೆ ಕೊಡಬೇಕಾದ ಮೊತ್ತ ರೂ.2,14,467/- ಎಂದು ನಮ್ಮ ದಾಖಲೆಯಲ್ಲಿ ಇದೆ ಎಂದರೆ ಸರಿಯಲ್ಲ. ದಿನಾಂಕಃ10-08-

2020 ರ ನಂತರ ನಮ್ಮ ಮತ್ತು ಆರೋಪಿಯ ನಡುವೆ ವ್ಯವಹಾರ ನಡೆದಿದೆ ಎಂದು ತೋರಿಸಲು ಯಾವುದಾದರೂ ದಾಖಲೆ ಇದೇಯಾ ಎಂದರೆ ಸಾಕ್ಷಿಯು ಸದರಿ ದಾಖಲೆಗಳನ್ನೆಲ್ಲವನ್ನೂ(ಇನ್ವಾಯ್ಸ್ ಮತ್ತು ಲೆಡ್ಜರ್ ಸ್ಟೇಟ್ಮೆಂಟ್) ನ್ಯಾಯಾಲಯಕ್ಕೆ ನೀಡಿದ್ದೇವೆ ಎಂದು ಹೇಳುತ್ತಾರೆ.

**7.** ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಮತ್ತು ಆರೋಪಿಯ ವ್ಯವಹಾರ ನಡೆಸಿದ ಬ್ಯಾಂಕ್ ಹೆಚ್.ಡಿ.ಎಫ್.ಸಿ ಮತ್ತು YES ಬ್ಯಾಂಕ್ ಬೆಂಗಳೂರು ಬ್ರಾಂಚ್ ನಲ್ಲಿ ಆಗಿರುತ್ತದೆ. ಸಾಕ್ಷಿಯು ಸ್ವಯಃ ಆಗಿ YES ಬ್ಯಾಂಕ್ ನಲ್ಲಿ ನಾವು ಆರೋಪಿ ನೀಡಿದ ಚೆಕ್ಕನ್ನು ಹಾಜರುಪಡಿಸಿದ್ದೇವೆ ಎಂದು ಹೇಳುತ್ತಾರೆ. ಸಾಕ್ಷಿಯು ಸ್ವಯಃ ಅಗಿ ದಿನಾಂಕಃ 04-12-2023 ರಲ್ಲಿ ಆರೋಪಿ ನಮಗೆ ಚೆಕ್ಕು ನೀಡಿರುತ್ತಾರೆ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**40ನೇ ಎ.ಸಿ.ಜೆ.ಎಂ. ಬೆಂಗಳೂರು.**

**ದಿನಾಂಕ 06-08-2026 ರಂದು ಮಧ್ಯಾಹ್ನ 3.00 ಗಂಟೆಗೆ ಪುನಃ ಸಾಕ್ಷಿಯನ್ನು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಎಸ್.ಟಿ.ಪಿ ವಕೀಲರಿಂದ :-**

**8.** ನಿಪಿ-6ನ್ನು ಸಾಕ್ಷಿಗೆ ತೋರಿಸಿ ಆರೋಪಿಯ ಹೆಸರಿನ ಕೆಳಗೆ ಇರುವ ಸೀಲು ಕನ್ನಡ ಭಾಷೆಯಲ್ಲಿ ಇದೆ ಎಂದರೆ ಸಾಕ್ಷಿಯು ಒಪ್ಪುತ್ತಾರೆ. ನಿಪಿ-6 ರಲ್ಲಿರುವ ಆರೋಪಿಯ ಸಹಿಗೂ ನಿಪಿ-

7 ರಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಒಪ್ಪುವುದಿಲ್ಲ. ನಿಪಿ-7 ರಲ್ಲಿ ಸೀಲು ಆಂಗ್ಲ ಭಾಷೆಯಲ್ಲಿ ಇದೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ನಿಪಿ-11 ದಾಖಲೆಯಲ್ಲಿ ಆರೋಪಿಯ ಸಹಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಒಪ್ಪುವುದಿಲ್ಲ. ನಿಪಿ-7, ನಿಪಿ-11 ರಲ್ಲಿ ನಿಮ್ಮ ಸಂಸ್ಥೆಯ ಸಹಿ ಮತ್ತು ಸೀಲು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಒಪ್ಪುತ್ತಾರೆ. ಸ್ವಯಃ ಆಗಿ ಅದು ಆನ್ಲೈನ್ ದಾಖಲೆ ಆಗಿದ್ದರಿಂದ ಸೀಲು ಮತ್ತು ಇಲ್ಲ ಎಂದು ಹೇಳುತ್ತಾರೆ. ಕಲಂ 63ಬಿ ಭಾರತೀಯ ಸಾಕ್ಷ್ಯ ಅಧಿನಿಯಮ ದಂತೆ ನೀವು ಪ್ರಮಾಣ ಪತ್ರ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಕಲಂ 63 ಬಿ ರಡಿಯಲ್ಲಿ ಪ್ರಮಾಣ ಪತ್ರ ಇಲ್ಲದ ಕಾರಣ ನಾವು ಸಲ್ಲಿಸಿದ ಮತ್ತು ನಿಶಾನಿಕರಿಸಿದ ದಾಖಲೆಗಳಿಗೆ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ನಿಯಮಾನುಸಾರ ನೀವು ಹಾಜರುಪಡಿಸುವ ದಾಖಲಾತಿಗೆ ಡಿಜಿಟಲ್ ಸೀಲು ಮತ್ತು ಸಹಿ ಇದ್ದೇ ಇರುತ್ತದೆ ಎಂದರೆ ಸಾಕ್ಷಿಯು ಇದ್ದರು ಇರಬಹುದು ಇಲ್ಲದೇ ಇದ್ದರೂ ಆಗುತ್ತದೆ ಎಂದು ಹೇಳುತ್ತಾರೆ. ಒಂದು ವೇಳೆ ಡಿಜಿಟಲ್ ದಾಖಲೆಯಾಗಿದ್ದರೆ ಸದರಿ ದಾಖಲೆಯಲ್ಲಿ ಅದಕ್ಕೆ ಡಿಜಿಟಲ್ ಸೀಲು ಮತ್ತು ಸಹಿ ಅವಶ್ಯಕತೆ ಇರುವುದಿಲ್ಲ ಎಂದು ನಮೂದಿರುತ್ತದೆ ಎಂದರೆ ಸಾಕ್ಷಿಯು ಇದ್ದರು ಇರಬಹುದು ಇಲ್ಲದೇ ಇದ್ದರೂ ಆಗುತ್ತದೆ ಎಂದು ಹೇಳುತ್ತಾರೆ. ನನಗೆ ಕಂಪನಿ ಕಾನೂನಿನ ಬಗ್ಗೆ ಪೂರ್ಣ ಮಾಹಿತಿ ಇದೆ. ಕಂಪನಿ ಕಾನೂನಿನ ಪ್ರಕಾರ ಯಾವುದೇ ಒಂದು ಗಣಕೀಕೃತ ದಾಖಲೆಗೆ ಕಂಪನಿಯ ಡಿಜಿಟಲ್ ಸೀಲು ಮತ್ತು ಸಹಿ ಇದ್ದೇ ಇರುತ್ತದೆ ಮತ್ತು ಇರಲೇಬೇಕು ಎಂದರೆ ಸಾಕ್ಷಿಯು ಒಪ್ಪುವುದಿಲ್ಲ.

**9.** ಆರೋಪಿಯ ಸಂಸ್ಥೆಯ ಡೀಲರ್ ಐ.ಡಿ ಗೊತ್ತಿದೆಯಾ ಎಂದರೆ ಸಾಕ್ಷಿಯು ದಾಖಲೆ ನೋಡಿ ಅದು ಡೀಲರ್ ಐ.ಡಿ ಅಲ್ಲ ಅದು MFMS ಐ.ಡಿ ಎಂದು ಹೇಳುತ್ತಾರೆ. ಐ.ಡಿ ಸಂಖ್ಯೆಯು 642774 ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿ ನಡೆಸುತ್ತಿರುವ ಸಂಸ್ಥೆ

ಫರ್ಟಿಲೈಸರ್ ಮಾರಾಟ ಮಾಡುವ ಸಂಸ್ಥೆಯಾಗಿದ್ದರಿದ ಅವರಿಗೆ ಸರ್ಕಾರದಿಂದ ಒಂದು ಸಂಖ್ಯೆ ಮತ್ತು ಪಾಯಿಂಟ್ ಆಫ್ ಸೇಲ್ ಮಿಷನ್ ಕೊಟ್ಟಿರುತ್ತಾರೆ. ಸದರಿ ಮಿಷನಿಗೆ ಆಧಾರ್ ಲಿಂಕ್ ಪಾಸ್ವರ್ಡ್ ಇರುತ್ತದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ನಾನು ಮೇಲೆ ಹೇಳಿದ MFMS ಐ.ಡಿ ಎಂದು ತೋರಿಸಿದಾಗ ಸಾಕ್ಷಿ ಒಪ್ಪುತ್ತಾರೆ. ಸದರಿ ದಾಖಲೆಯನ್ನು **ನಿಡಿ-1** ಎಂದು ಗುರುತಿಸಲಾಯಿತು. ಸಾಕ್ಷಿಗೆ ಅದೇ ರೀತಿಯ ಇನ್ನೊಂದು ದಾಖಲೆಯನ್ನು ತೋರಿಸಿದಾಗ ಸಾಕ್ಷಿ ಒಪ್ಪುತ್ತಾರೆ. ಸದರಿ ದಾಖಲೆಯನ್ನು **ನಿಡಿ-2** ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ-2 ನ್ನು ತೋರಿಸಿ ಅದರಲ್ಲಿ ದಿನಾಂಕಃ 30-04-2020 ಎಂದು ನಮೂದಿದೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ಸಾಕ್ಷಿಗೆ ನಿಡಿ-2 ರಲ್ಲಿ ಆರೋಪಿಯ MFMS ಐ.ಡಿ ನಂಬರ್ ಇದೆ ಎಂದಾಗ ಸಾಕ್ಷಿಯು ಒಪ್ಪುವುದಿಲ್ಲ. ಮುಂದುವರೆದು ಅದು ನಂಬರ್ ವ್ಯತ್ಯಾಸ ಇದೆ ಎಂದು ಹೇಳುತ್ತಾರೆ. ನಿಡಿ-1 ರಲ್ಲಿ ಹೇಳಿದ ಐ.ಡಿ ನಂಬರ್ ನಿಡಿ-2 ರಲ್ಲಿ ಇಲ್ಲ. ನಿಡಿ-1 ರಲ್ಲಿ ಆರೋಪಿಯ ಸಂಸ್ಥೆಗೆ ಸೇರಿದ ಐ.ಡಿ ನಂಬರ್ ಇದ್ದು ನಿಡಿ-2 ರಲ್ಲಿ ಅದು ತಪ್ಪಾಗಿದೆ. ನಿಪಿ-9 ರಲ್ಲಿರುವ ಡೀಲರ್ ಐ.ಡಿ ಗೂ ನಿಡಿ-2 ರಲ್ಲಿರುವ ಡೀಲರ್ ಐ.ಡಿ ಗೂ ಸಾಮ್ಯತೆ ಇಲ್ಲ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ನಿಪಿ-1 ರಿಂದ ನಿಪಿ-11 ನಾವು ಸೃಷ್ಟಿಸಿ ಲಾಭ ಪಡೆಯಲು ತಯಾರಿಸಿದ ದಾಖಲೆ ಎಂದರೆ ಸರಿಯಲ್ಲ.

**10.** ಯಾವುದೇ ಒಂದು ಕರಾರಿಗೆ ನಾವು ಪಕ್ಷಗಾರರಾಗಬೇಕಾದರೆ ಎದುರುದಾರರಿಂದ ಖಾಲಿ ಚೆಕ್ಕುಗಳಿಗೆ ಸಹಿ ಹಾಕಿಸಿ ಪಡೆಯುವುದು ನಮ್ಮ ಸಂಸ್ಥೆಯ ಪದ್ದತಿ ಎಂದರೆ ಸರಿಯಲ್ಲ. ಆರೋಪಿ ಕಡೆಯಿಂದ ನಾವು 2023 ರಲ್ಲಿ ಯಾವುದೇ ಖಾಲಿ ಚೆಕ್ಕಿಗೆ ಸಹಿ ಪಡೆದುಕೊಂಡಿಲ್ಲ. ಆರೋಪಿಯು ಯಾವ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದನು ಎಂದು ನನಗೆ ಗೊತ್ತಿಲ್ಲ. ಆರೋಪಿಯ ಚೆಕ್ಕು ಯಾವ ಬ್ಯಾಂಕ್ ಗೆ ಸಂಬಂಧಿಸಿದ್ದು ಎಂದು ಈಗ ನನಗೆ ಗೊತ್ತಿಲ್ಲ. ಆರೋಪಿ ನಮಗೆ

ನೀಡಿದ ಈ ಪ್ರಕರಣದ ಚೆಕ್ಕು ಸಂಖ್ಯೆ, ಯಾವ ಬ್ಯಾಂಕ್ ಮತ್ತು ಯಾವ ಬ್ರಾಂಚ್ ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ನಾವು ನಗದೀಕರಣಕ್ಕೆ ಸದರಿ ಚೆಕ್ಕನ್ನು ಸಲ್ಲಿಸಿದ್ದೇವೆ, ಯಾವಾಗ ನಮಗೆ ಬ್ಯಾಂಕ್ ನವರು ಮೆಮೋ ನೀಡಿದ್ದಾರೆ ಎಂದು ನನಗೆ ಗೊತ್ತಿದೆ. ಚೆಕ್ಕು ಕ್ಯಾನ್ಸಲ್ ಆಗಿರುತ್ತದೆ ಎಂದು ನಮಗೆ ಬ್ಯಾಂಕ್ ನವರು ಹಿಂಬರಹ ನೀಡಿರುತ್ತಾರೆ. ನಮ್ಮ ದೂರಿನಲ್ಲಿ ನಾವು ಚೆಕ್ಕು ಕ್ಯಾನ್ಸಲ್ಡ್ ಮತ್ತು ಡಿಸಾನರ್ ಆಗಿರುತ್ತದೆ ಎಂದು ಹೇಳಿದ್ದೇನೆ. ನಮ್ಮ ಮುಖ್ಯ ವಿಚಾರಣೆಯ ಅಫಿಡೆವಿಟ್ ನಲ್ಲಿ ನಾನು ಅದನ್ನೇ ಹೇಳಿದ್ದೇನೆ.

**11.** ಆರೋಪಿ ದಿನಾಂಕಃ 04-12-2023 ರಂದು ಬೆಳಿಗೆ 9.00 ರಿಂದ 10.00 ಗಂಟೆ ಸಮಯಕ್ಕೆ ನಮ್ಮ ಕಛೇರಿಗೆ ಬಂದು ಆರೋಪಿ ಚೆಕ್ಕು ನೀಡಿದ್ದಾರೆ. ಈ ವಿಚಾರವನ್ನು ನನ್ನ ದೂರಿನಲ್ಲಿ ಬರೆಸಿಲ್ಲ. ಆರೋಪಿ ನಮ್ಮ ಕಛೇರಿಗೆ ಆ ದಿನ ಬಂದ ಬಗ್ಗೆ ಯಾವುದಾದರು ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನನ್ನ ದೂರಿನಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ನಾನು ಈ ಎಲ್ಲಾ ವಿಚಾರವನ್ನು ಹೇಳದೆ ಈ ದಿನ ಪಾಟೀಸವಾಲಿನಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ಕು ನೀಡುವ ಕಾಲಕ್ಕೆ ಆರೋಪಿ ಖಾತೆ ಚಾಲ್ತಿಯಲ್ಲಿತ್ತಾ ಇಲ್ಲವಾ ಎಂದು ಕೇಳಿಲ್ಲ. ಈ ಚೆಕ್ಕಿನ ಮತ್ತು ಆರೋಪಿಯ ಖಾತೆಯ ಬಗ್ಗೆ ಚೆಕ್ಕು ಹಾಜರುಪಡಿಸುವ ಮೊದಲು ವೈಯಕ್ತಿಕ ಮಾಹಿತಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿ ಸಾಕಷ್ಟು ಹಣ ಖಾತೆಯಲ್ಲಿ ಇದೆ ಎಂದು ಹೇಳಿದ್ದರಿಂದಲೇ ನಾವು ಚೆಕ್ಕನ್ನು ಹಾಜರುಪಡಿಸಿದ್ದು ಎಂದು ಸಾಕ್ಷಿ ಹೇಳುತ್ತಾರೆ. Insufficient funds ಎಂದು ಬ್ಯಾಂಕಿನವರು ಮೆಮೋ ನೀಡಿದ್ದು ಖಾತ್ರಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ದಾಖಲೆ ನೋಡಿ ಹೇಳಬೇಕು ಎಂದು ಸಾಕ್ಷಿ ಹೇಳುತ್ತಾರೆ. ನನಗೆ ದಾಖಲೆ ನೋಡದೆ ಹೇಳಲು ಆಗವುದಿಲ್ಲ ಎಂದರೆ ಸರಿ. ನಾನು ಯಾವುದೇ ದಾಖಲೆ ನೋಡದೆ ನ್ಯಾಯಾಲಯದ ಮುಂದೆ ಅಫಿಡೆವಿಡ್ ಸಲ್ಲಿಸಿದ್ದೇನೆ

ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ ನೀವು ಅಫಿಡೆವಿಡ್ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿಯೇ ಅಫಿಡೆವಿಡ್ ಸಲ್ಲಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕಃ 05-03-2021 ರಂದೇ ಆರೋಪಿಯ ಖಾತೆ ಮುಚ್ಚಲಾಗಿತ್ತು(ಕ್ಲೋಸ್ ಆಗಿತ್ತು) ಎಂದರೆ ನನಗೆ ಮಾಹಿತಿ ಇಲ್ಲ. ನನಗೆ ಈ ರೀತಿ ಖಾತೆ ಕ್ಲೊಸ್ ಆದ ಬಗ್ಗೆ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರಣ ಆರೋಪಿ ಮತ್ತು ನಿಮ್ಮ ವ್ಯವಹಾರ ಕೊನೆಯದಾಗಿ ದಿನಾಂಕಃ 29-06-2020 ರವರೆಗೆ ಮಾತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಟ್ರಾನ್ಸಾಕ್ಷನ್ ಆಗುವಾಗ ನಿಮಗೆ ವೈಯಕ್ತಿಕ ಮಾಹಿತಿ ಇತ್ತಾ ಎಂದರೆ ಸಾಕ್ಷಿಯು ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ಖಾತೆ ಮತ್ತು ವ್ಯವಹಾರದ ಬಗ್ಗೆ ನೀವು ಏನಾದರೂ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ವ್ಯವಹಾರದ ಬಗ್ಗೆ ನಾನು ತಿಳಿದುಕೊಂಡಿದ್ದೆನು ಆದರೆ ಖಾತೆಯ ಬಗ್ಗೆ ತಿಳಿದುಕೊಂಡಿಲ್ಲ. ಲೆಡ್ಜರ್ ನೋಡಿ ಬ್ಯಾಂಕ್ ಖಾತೆಯ ತಿಳಿದುಕೊಳ್ಳುವ ಪ್ರಮೇಯ ನಮಗೆ ಬರುವುದೇ ಇಲ್ಲ ಆದ್ದರಿಂದ ನಾನು ತಿಳಿದುಕೊಂಡಿಲ್ಲ. ಕರಾರಿಗೆ ಪಕ್ಷಗಾರರಾಗುವ ಮೊದಲು ಎದುರುದಾರರ ಸಂಪೂರ್ಣ ಮಾಹಿತಿ ಅಂದರೆ ಬ್ಯಾಂಕ್ ಖಾತೆಯ ಮಾಹಿತಿಯನ್ನು ನೀವು ಪಡೆದುಕೊಳ್ಳುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ.

**12.** ದಿನಾಂಕಃ 04-12-2023 ರಂದು ಆರೋಪಿಯ ಮದುವೆ ಇದ್ದರಿಂದ ಆರೋಪಿ ಆ ದಿನ ನಮ್ಮ ಶಾಖೆಗೆ ಬಂದು ನಿಪಿ-1 ಚೆಕ್ಕು ನೀಡುವ ಸಾಧ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಬ್ಯಾಂಕ್ ಖಾತೆಯನ್ನು ಅಥವಾ ಬ್ಯಾಂಕ್ ಖಾತೆಗೆ ಹಣ ಬಂದ ವಿವರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

**13.** ಸಾಕ್ಷಿಗೆ ಆರೋಪಿಯ ಕರ್ನಾಟಕ ಬ್ಯಾಂಕ್, ಸಾಲಿಗ್ರಾಮ ಬ್ರಾಂಚ್ ನ ಖಾತೆಯನ್ನು ತೋರಿಸಿ ದಿನಾಂಕಃ 30-04-2020 ಕ್ಕೆ ನಿಮ್ಮ ಸಂಸ್ಥೆಗೆ ಆರೋಪಿಯು ರೂ.1,00,000/- ವನ್ನು ಜಮಾ ಮಾಡಿದ್ದಾರೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಯು ಸ್ವಯಃ ಆಗಿ ನಮ್ಮ ಖಾತೆಗೆ ದಿನಾಂಕಃ 01-05-2020ಕ್ಕೆ ಜಮಾ ಆಗಿರುತ್ತದೆ ಎಂದು ಹೇಳುತ್ತಾರೆ. ಇದೇ ರೀತಿ ದಿನಾಂಕಃ 08-05-2020 ಕ್ಕೂ ಸಹ ನಿಮ್ಮ ಖಾತೆಗೆ ರೂ.1,00,000/- ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ದಿನಾಂಕಃ 11-05-2020 ಕ್ಕೆ ನಮ್ಮ ಖಾತೆಗೆ ಜಮಾ ಆಗಿರುತ್ತದೆ ಎಂದು ಒಪ್ಪುತ್ತಾರೆ. ದಿನಾಂಕಃ 27-05-2020 ರಂದು ಸಹ ನಿಮ್ಮ ಖಾತೆಗೆ ರೂ.2,00,000/- ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಖಾತೆಗೆ ದಿನಾಂಕಃ 28-05-2020 ರಂದು ಜಮಾ ಆಗಿರುತ್ತದೆ ಎಂದು ಹೇಳುತ್ತಾರೆ. ಅದೇ ರೀತಿ ದಿನಾಂಕಃ 24-08-2020 ರಂದು ಸಹ ನಿಮ್ಮ ಖಾತೆಗೆ ರೂ.2,00,000/- ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಖಾತೆಗೆ ದಿನಾಂಕಃ 25-08-2020 ರಂದು ಜಮಾ ಆಗಿರುತ್ತದೆ ಎಂದು ಹೇಳುತ್ತಾರೆ. ದಿನಾಂಕಃ 18-01-2018 ರಂದು IFFDC New Delhi ಅಂದರೆ ನಮ್ಮ ಕಂಪನಿಗೆ ರೂ.50,000/- ಭದ್ರತಾ ಠೇವಣಿಯಾಗಿ ಆರೋಪಿ ಡಿ.ಡಿ ನೀಡಿದ್ದಾರೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ಆರೋಪಿಯ ಖಾತೆಯ ಪ್ರತಿಯನ್ನು **ನಿಡಿ-3** ಎಂದು ಗುರುತಿಸಲಾಯಿತು. ಡಿ.ಡಿಯ ನೆರಳಚ್ಚು ಪ್ರತಿಯನ್ನು ಸಾಕ್ಷಿ ಒಪ್ಪಿದ್ದರಿಂದ **ನಿಡಿ-4** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**40ನೇ ಎ.ಸಿ.ಜೆ.ಎಂ. ಬೆಂಗಳೂರು.**